KASM620001672025

Presented on : 13-02-2025
Registered on : 13-02-2025
Decided on : 29-08-2026
Duration : 1 years, 6 months, 16 days

# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಾಗರ.

: **ಉಪಸ್ಥಿತರು**:

ಶ್ರೀ **ಮಾದೇಶ ಎಂ.ವಿ.,** ಬಿ.ಕಾಂ., ಎಲ್.ಎಲ್.ಬಿ.,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಸಾಗರ.

ದಿನಾಂಕಃ 29 ನೇ ಆಗಸ್ಟ್ 2026

**ಸಿ.ಸಿ. ಸಂಖ್ಯೆ 69/2025**

**ಪಿರ್ಯಾದಿದಾರರುಃ**

ಎನ್. ಎಲ್. ಸುಮಂತ್
ಬಿನ್ ಎನ್. ಎಸ್. ಲಕ್ಷ್ಮೀನಾರಾಯಣ
ವಯಸ್ಸು ಸುಮಾರು 34 ವರ್ಷ,
ವಾಸಃ ಸೊರಬ ತಾಲ್ಲೂಕು, ಮುಡುಗೋಡು ಗ್ರಾಮ,
ಹಾಲಿ ವಾಸಃ ಬೆಂಗಳೂರು.

**(ಶ್ರೀ ಎಂ.ಎಸ್.ಜಿ.,ವಕೀಲರು)**

**ವಿರುದ್ಧ**

**ಆರೋಪಿ:**

ಉಮೇಶ್ ಬಿನ್ ಚಂದ್ರಪ್ಪ
ವಯಸ್ಸು ಸುಮಾರು 47 ವರ್ಷ,
ವಾಸಃ 7 ನೇ ತಿರುವು ನೆಹರು ನಗರ,
ಸಾಗರ ಟೌನ್.

**(ಶ್ರೀ ಎಂ.ಎ.ಬಿ.,ವಕೀಲರು)**

## ತೀರ್ಪು

ಆರೋಪಿಯು ಲಿಖಿತ ಪತ್ರಗಳ ವರ್ಗಾವಣೆ ಕಾಯಿದೆಯ ಕಲಂ 138ರ ಅಡಿಯಲ್ಲಿ ಅಪರಾಧ ಎಸಗಿದ್ದಾರೆ ಎಂದು ಪ್ರಸ್ತುತ ಖಾಸಗಿ ದೂರನ್ನು ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಯ ಕಲಂ 223 ರ ಅಡಿಯಲ್ಲಿ ಸಲ್ಲಿಸಲಾಗಿದೆ.

2. **ಫಿರ್ಯಾದುದಾರರ ದೂರಿನ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇದೆ.**

ದಿನಾಂಕ 28.07.2012 ರಂದು ಫಿರ್ಯಾದಿಗೆ ತಮ್ಮ ಕುಟುಂಬದ ಹಿಸ್ಸಾ ಪತ್ರದ ಮೂಲಕ ಕೆಲವು ಆಸ್ತಿಗಳು ತನ್ನ ತಂದೆಯಿಂದ ಬಂದಿದ್ದು, ಫಿರ್ಯಾದಿಯು ವಿದ್ಯಾಭ್ಯಾಸ ಮುಗಿಸಿದ ನಂತರ, ಬೆಂಗಳೂರಿನಲ್ಲಿ ಖಾಯಂ ಆಗಿ ವಾಸವಾಗಿರುವುದರಿಂದ ಫಿರ್ಯಾದಿಯ ಬಾಬ್ತು ಮೂಡಗೂಡು ಗ್ರಾಮದಲ್ಲಿರುವ ಸ್ಥಿರಾಸ್ತಿಗಳನ್ನು ಫಿರ್ಯಾದಿಯ ತಂದೆ ಆಡಳಿತ ಮಾಡುತ್ತಿದ್ದಾರೆ. ಸದರಿ ಫಿರ್ಯಾದಿಯು ತನ್ನ ಗೃಹಕೃತ್ಯದ ಅಡಚಣೆಗಾಗಿ ಮೂಡಗೂಡು ಗ್ರಾಮದ ಸರ್ವೆ ನಂಬರ್ 1/10ರ ಜಮೀನಿನ ಮಾರಾಟ ಮಾಡುವ ಸಲುವಾಗಿ ಗಿರಾಕಿಗಳನ್ನು ಹುಡುಕುತ್ತಿದ್ದಾಗ, ಆರೋಪಿತನು ಸದರಿ ಆಸ್ತಿಯನ್ನು 4,50,000/-

ರೂಗಳಿಗೆ ಖರೀದಿಸುವುದಾಗಿ ಒಪ್ಪಿ ದಿನಾಂಕ 18.10.2024 ರಂದು ನೊಂದಾಯಿತ ಕ್ರಯಪತ್ರದ ಮೂಲಕ ಸದರಿ ಆಸ್ತಿಯನ್ನು ಫಿರ್ಯಾದಿಯಿಂದ ಆರೋಪಿತನು ಖರೀದಿ ಮಾಡಿರುತ್ತಾನೆ. ಸದರಿ ಕ್ರಯದ ಪ್ರತಿಫಲವಾದ 4,50,000/- ರೂಗಳ ಪಾವತಿಗಾಗಿ ಫಿರ್ಯಾದಿಗೆ ಆರೋಪಿತನು ಸಾಗರದ ಕೆನರಾ ಬ್ಯಾಂಕಿನ ಚೆಕ್ ನಂಬರ್ 557839 ನ್ನು ನೀಡಿ, ಸದರಿ ಚೆಕ್ಕನ್ನು ಆರೋಪಿತನ ಆಶ್ವಾಸನೆಯಂತೆ ಫಿರ್ಯಾದಿಯು ದಿನಾಂಕ 22.10.2024 ರಂದು ನಗದೀಕರಣಕ್ಕಾಗಿ ಸಾಗರದ ಎಸ್.ಪಿ.ಎಂ. ರಸ್ತೆಯಲ್ಲಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಇಲ್ಲಿ ಹಾಜರುಪಡಿಸಿದಾಗ, **ಆರೋಪಿತನ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ** ಎಂಬ ಕಾರಣಕ್ಕಾಗಿ ಸದರಿ ಚೆಕ್ಕು ಅನಾದರಣಗೊಂಡಿರುತ್ತದೆ. ಇದರಿಂದ ಬೇಸರಗೊಂಡ ಫಿರ್ಯಾದಿಯು ಕ್ರಯದ ವ್ಯವಹಾರದಲ್ಲಿ ಮಧ್ಯಸ್ಥಗಾರನಾಗಿದ್ದ ಸೋಮಪ್ಪ ಪೂಜಾರಿ ರವರ ಮೂಲಕ ಚೆಕ್ ಅಮಾನ್ಯಗೊಂಡ ಬಗ್ಗೆ ಆರೋಪಿತನಿಗೆ ತಿಳಿಸಿದ್ದಲ್ಲದೆ, ಸ್ವತಃ ದೂರವಾಣಿ ಮೂಲಕವೂ ಸಹ ಆರೋಪಿತನನ್ನು ಕೇಳಿದಾಗ, ಆರೋಪಿತನು ಉಡಾಫೆಯಾಗಿ ಉತ್ತರಿಸಿರುತ್ತಾನೆ. ಕೊನೆಗೆ ದಿನಾಂಕ 16.11.2024 ರಂದು, ಫಿರ್ಯಾದಿಯು ತಮ್ಮ ವಕೀಲರ ಮೂಲಕ ಆರೋಪಿತನಿಗೆ ನೊಂದಾಯಿತ ಅಂಚೆ ಪದ್ಧತಿಯಲ್ಲಿ ದಿನಾಂಕ 06.11.2024 ರಂದು ನೋಟಿಸ್ ಅನ್ನು ನೀಡಿದ್ದು, ಸದರಿ ನೋಟಿಸು ದಿನಾಂಕ 09.11.2024 ರಂದು ಜಾರಿಯಾಗಿದ್ದರೂ ಸಹ, ಆರೋಪಿತನು ಸದರಿ ನೋಟಿಸಿಗೆ ಉತ್ತರವನ್ನು ನೀಡಿಲ್ಲ ಹಾಗೂ ಚೆಕ್ಕಿನ ಹಣವನ್ನು ಫಿರ್ಯಾದಿಗೆ ಮರುಪಾವತಿ ಮಾಡಿರುವುದಿಲ್ಲ. ಆದ್ದರಿಂದ, ಆರೋಪಿತನ ವಿರುದ್ಧ ಲಿಖಿತ ಪತ್ರಗಳ

ವರ್ಗಾವಣೆ ಕಾಯ್ದೆಯ ಕಲಂ 138ರ ಅಡಿಯಲ್ಲಿನ ಅಪರಾಧಕ್ಕೆ ಕ್ರಮ ಕೈಗೊಳ್ಳುವಂತೆ ಪ್ರಸ್ತುತ ದೂರನ್ನು ಸಲ್ಲಿಸಲಾಗಿದೆ.

3. ಈ ನ್ಯಾಯಾಲಯವು ಲಿಖಿತ ಪತ್ರಗಳ ವರ್ಗಾವಣೆ ಕಾಯ್ದೆಯ ಅಡಿಯಲ್ಲಿ ಆರೋಪಿಯ ವಿರುದ್ಧ ಆರೋಪಿಸಿರುವ ಅಪರಾಧಕ್ಕೆ ಸಂಜ್ಞಾನವನ್ನು ತೆಗೆದುಕೊಂಡ ನಂತರ, ಆರೋಪಿತನ ಹಾಜರಾತಿಗಾಗಿ ಸಮನ್ಸನ್ನು ನೀಡಿರುತ್ತದೆ. ನಂತರ ಆರೋಪಿತನು ತಮ್ಮ ವಕೀಲರ ಮೂಲಕ ನ್ಯಾಯಾಲಯದ ಮುಂದೆ ಹಾಜರಾಗಿ ಜಾಮೀನನ್ನು ಪಡೆದುಕೊಂಡಿರುತ್ತಾನೆ. ಲಿಖಿತ ಪತ್ರಗಳ ವರ್ಗಾವಣೆ ಕಾಯಿದೆಯ ಕಲಂ 138ರ ಅಡಿಯಲ್ಲಿ ಆರೋಪಿಸಿರುವ ಅಪರಾಧಕ್ಕಾಗಿ ಆರೋಪಿತನಿಗೆ ಆರೋಪವನ್ನು ರಚಿಸಿ ಅವನಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಲಾಯಿತು. ಆರೋಪಿತನು ಸದರಿ ತಪ್ಪಿನ ವಾದವನ್ನು ನಿರಾಕರಿಸಿ ವಿಚಾರಣೆಯಾಗಲಿ ಎಂದು ಕೇಳಿಕೊಂಡ ಮೇರೆಗೆ ಪ್ರಕರಣವನ್ನು ವಿಚಾರಣೆಗಾಗಿ ಮುಂದೂಡಲಾಗಿರುತ್ತದೆ.

4. ಪಿರ್ಯಾಧಿಯು ತನ್ನ ದೂರಿನಲ್ಲಿ ಹೇಳಿರುವ ಸಂಗತಿಗಳನ್ನು ನಿರೂಪಿಸುವ ಸಲುವಾಗಿ, ತನ್ನನ್ನು ತಾನು ಪಿ.ಡಬ್ಲ್ಯೂ-1 ಎಂದು ವಿಚಾರಣೆಗೆ ಒಳಪಡಿಸಿಕೊಂಡು, ತಮ್ಮ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣ ಪತ್ರವನ್ನು ಆರಂಭಿಕ ಹಂತದಲ್ಲಿ ಸಲ್ಲಿಸಿದ್ದರು. ನಂತರ ಸದರಿ ಫಿರ್ಯಾದಿಯ ತಂದೆ ಫಿರ್ಯಾದಿಯಿಂದ ನಿ.ಪಿ7ರಂತೆ ಅಧಿಕಾರ ಪತ್ರವನ್ನು ಪಡೆದುಕೊಂಡು ಪಿ.ಡಬ್ಲ್ಯೂ 2 ಎಂದು ವಿಚಾರಣೆಗೆ ಒಳಪಟ್ಟು ತಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿ ಒಟ್ಟು 8 ದಾಖಲೆಗಳನ್ನು ಫಿರ್ಯಾದಿಯ ಪರವಾಗಿ

ನಿಶಾನೆಗಳಾಗಿ ಗುರುತಿಸಿಕೊಂಡಿರುತ್ತಾರೆ. ಪಿ.ಡಬ್ಲ್ಯೂ 2 ರವರು ತಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ದೂರಿನಲ್ಲಿರುವ ಎಲ್ಲಾ ಸಂಗತಿಗಳನ್ನು ಪುನರುಚ್ಚರಿಸಿರುತ್ತಾರೆ ಹಾಗೂ ನಿ.ಪಿ–1 ರಿಂದ 8 ದಾಖಲೆಗಳನ್ನು ತನ್ನ ಪರವಾಗಿ ಗುರುತಿಸಿಕೊಂಡಿರುತ್ತಾರೆ.

5. ಪಿರ್ಯಾದುದಾರರ ಪರ ಸಾಕ್ಷ್ಯ ವಿಚಾರಣೆ ಮುಗಿದ ನಂತರ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಯ ಕಲಂ 351 ರ ಅಡಿಯಲ್ಲಿ ಆರೋಪಿತನ ಹೇಳಿಕೆಯನ್ನು ಅಭಿಲೇಖಿಸಲಾಯಿತು. ಆರೋಪಿಯು ತನ್ನ ಹೇಳಿಕೆಯಲ್ಲಿ ಅಭಿಲೇಖಿಸಿದ ತನ್ನ ವಿರುದ್ಧದ ಎಲ್ಲಾ ಹೇಳಿಕೆಗಳನ್ನು ಅಲ್ಲಗಳೆದು ತಾನು ನಿರಪರಾಧಿ ಎಂದು ನಿರೂಪಿಸುವ ಸಲುವಾಗಿ ತನ್ನನ್ನು ತಾನು ಡಿ.ಡಬ್ಲ್ಯೂ–1 ಎಂದು ವಿಚಾರಣೆಗೆ ಒಳಪಡಿಸಿಕೊಂಡಿರುತ್ತಾರೆ. ಸದರಿ ಆರೋಪಿತನು ತನ್ನ ಪರವಾಗಿ ಒಟ್ಟು 5 ದಾಖಲೆಗಳನ್ನು ತನ್ನ ಪರವಾಗಿ ನಿಶಾನೆಯಾಗಿ ಗುರುತಿಸಿಕೊಂಡಿದ್ದಾರೆ.

6. ಉಭಯ ಪಕ್ಷಗಾರರ ವಾದ–ವಿವಾದಗಳನ್ನು ಆಲಿಸಲಾಯಿತು ಮತ್ತು ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಲಾಯಿತು. ನ್ಯಾಯಾಲಯದ ಪರಿಗಣನೆಗೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆ.

## ಅಂಶಗಳು

1. ಆರೋಪಿತನು ಫಿರ್ಯಾದಿಗೆ ಮೂರುಗೋಡು ಗ್ರಾಮದ ಸರ್ವೆ ನಂಬರ್ 1/10ರ ಕ್ರಯದ ಬಾಬ್ತು ಫಿರ್ಯಾದಿಗೆ ಕಾನೂನಾತ್ಮಕವಾಗಿ ಪಾವತಿಸಬೇಕಾದ ಹಣಕ್ಕಾಗಿ ತನ್ನ ಖಾತೆ ಹೊಂದಿರುವ ಕೆನರಾ ಬ್ಯಾಂಕ್, ಸಾಗರ ಶಾಖೆಯ ಚೆಕ್

ನಂಬರ್ 557839 ಅನ್ನು ದಿನಾಂಕ 19.10.2024 ರಂದು ನಗದಾಗುವಂತೆ 4,50,000/- ರೂಗಳಿಗೆ ಫಿರ್ಯಾದಿದಾರರ ಪರವಾಗಿ ನೀಡಿರುತ್ತಾರೆಯೇ?

2. ಸದರಿ ಚೆಕ್ಕನ್ನು ಫಿರ್ಯಾದಿಯು ತನ್ನ ಖಾತೆ ಹೊಂದಿರುವ Bank of Baroda ಸಾಗರ ಶಾಖೆಗೆ ನಗದೀಕರಣಕ್ಕಾಗಿ ಹಾಜರುಪಡಿಸಿದಾಗ ಸದರಿ ಚೆಕ್ಕು **ಆರೋಪಿತನ ಖಾತೆಯಲ್ಲಿ ಸಾಕಷ್ಟು ಹಣವು ಇಲ್ಲ** ಎಂಬ ಕಾರಣಕ್ಕಾಗಿ ಅನಾಧರಿತವಾಗಿದೆಯೇ?

3. ಫಿರ್ಯಾದಿಯ ನಿಗಧಿತ ಕಾಲಾವಧಿಯಲ್ಲಿ ಆರೋಪಿತನಿಗೆ ನೋಟೀಸನ್ನು ನೀಡಿ, ಚೆಕ್ಕಿನಲ್ಲಿ ಒಳಗೊಂಡಿರುವ ಹಣವನ್ನು ಪಾವತಿಸುವಂತೆ ಕೇಳಿಕೊಂಡಿದ್ದಾರೆಯೇ?

4. ಸದರಿ ನೋಟೀಸು ಅನ್ನು ಆರೋಪಿತನಿಗೆ ನೀಡಿದ ನಂತರವೂ ಸಹ, ಆರೋಪಿತನು ಚೆಕ್ಕಿನ ಹಣವನ್ನು ನಿಗದಿತ ಅವಧಿಯಲ್ಲಿ ಪಾವತಿಸದೆ ಇರುವ ಕಾರಣ, ಆರೋಪಿತನು ಲಿಖಿತ ಪತ್ರಗಳ ವರ್ಗಾವಣೆ ಕಾಯ್ದೆಯ ಕಲಂ 138 ರ ಅಡಿಯಲ್ಲಿ ಅಪರಾಧವನ್ನು ಎಸಗಿದ್ದಾರೆಯೇ?

5. ಯಾವ ಆದೇಶ?

7. ಮೇಲಿನ ಅಂಶಗಳಿಗೆ ನ್ಯಾಯಾಲಯದ ಉತ್ತರವು ಈ ಕೆಳಕಂಡಂತೆ ಇರುತ್ತದೆ.

**ಅಂಶ. 1 : ಸಕಾರಾತ್ಮಕವಾಗಿ**

**ಅಂಶ. 2 : ಸಕಾರಾತ್ಮಕವಾಗಿ**

**ಅಂಶ. 3 : ಸಕಾರಾತ್ಮಕವಾಗಿ**

**ಅಂಶ. 4 : ನಕಾರಾತ್ಮಕವಾಗಿ**

**ಅಂಶ.5 : ಈ ಕೆಳಕಂಡ ಕಾರಣಗಳಿಂದಾಗಿ ಅಂತಿಮ ಆದೇಶದಂತೆ –**

## ಕಾ ರ ಣ ಗ ಳು

8. **ಅಂಶ–1 ರಿಂದ 4:–** ಈ ನಾಲ್ಕು ಅಂಶಗಳ ಮೇಲಿನ ಚರ್ಚೆಯು ಒಂದರ ಮೇಲೆ ಇನ್ನೊಂದು ಅವಲಂಬಿತವಾಗಿರುವುದರಿಂದ ಮತ್ತು ಪ್ರಕರಣದ ವಸ್ತುಸ್ಥಿತಿಗಳ ಮತ್ತು ವಾಕ್ಯಗಳ ಪುನರಾವರ್ತನೆಯನ್ನು ತಪ್ಪಿಸುವುದಕ್ಕಾಗಿ, ಈ ಎಲ್ಲಾ ಅಂಶಗಳನ್ನು ಏಕಕಾಲಕ್ಕೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

ಆರೋಪಿತನು ಫಿರ್ಯಾದಿದಾರರ ಮೂಡಗೋಡು ಗ್ರಾಮದ ಸರ್ವೆ ನಂಬರ್ 1/10ರ ಜಮೀನನ್ನು 4,50,000/- ರೂಗಳಿಗೆ ಖರೀದಿ ಮಾಡಿದ್ದು, ಸದರಿ ಕ್ರಯದ ಪ್ರತಿಫಲವನ್ನು ಫಿರ್ಯಾದಿಗೆ ಪಾವತಿಸುವ ಸಲುವಾಗಿ ನಿ.ಪಿ–1ರ ಚೆಕ್ಕನ್ನು ಫಿರ್ಯಾದಿಯ ಪರವಾಗಿ ನೀಡಿರುತ್ತಾರೆ. ನಂತರ, ಸದರಿ ಚೆಕ್ಕನ್ನು ಫಿರ್ಯಾದಿದಾರರು ನಗದೀಕರಣಕ್ಕಾಗಿ ಸಾಗರ ಟೌನ್ ನ ಎಸ್.ಪಿ.ಎಂ. ರಸ್ತೆಯಲ್ಲಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಗೆ ಹಾಜರುಪಡಿಸಿದಾಗ **ಆರೋಪಿತನ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ** ಎಂಬ ಕಾರಣಕ್ಕಾಗಿ ಆರೋಪಿತನು ನೀಡಿದ ಚೆಕ್ಕು ಅನಾದರಣಗೊಂಡಿರುತ್ತದೆ. ಈ ಕುರಿತಂತೆ ನಿ.ಪಿ–3ರ ನೋಟಿಸನ್ನು ಫಿರ್ಯಾದಿಯು ಆರೋಪಿತನಿಗೆ ನೀಡುವ ಮೂಲಕ ಚೆಕ್ಕು

ಅನಾದರಣಗೊಂಡ ಕುರಿತು ಮಾಹಿತಿಯನ್ನು ನೀಡಿರುತ್ತಾರೆ. ಸದರಿ ಚೆಕ್ಕು ದಿನಾಂಕ 09.11.2024 ರಂದು ಆರೋಪಿತನಿಗೆ ಖುದ್ದು ಜಾರಿಯಾಗಿದ್ದರೂ ಸಹ, ಸದರಿ ನೋಟಿಸಿಗೆ ಆರೋಪಿತನು ಯಾವುದೇ ಉತ್ತರವನ್ನು ನೀಡಿಲ್ಲ ಮತ್ತು ಚೆಕ್ಕಿನ ಹಣವನ್ನು ಫಿರ್ಯಾದಿಗೆ ಮರುಪಾವತಿ ಮಾಡಿಲ್ಲ ಎಂಬುದಾಗಿ ಪಿ.ಡಬ್ಲ್ಯೂ 2 ರವರು ತಮ್ಮ ದೂರಿಗೆ ಅನುಗುಣವಾಗಿ ಪ್ರಮಾಣ ಪೂರ್ವಕವಾಗಿ ಹೇಳಿಕೆಯನ್ನು ನೀಡಿದ್ದಾರೆ. ದೂರಿನ ಸಂಗತಿಗಳನ್ನು ಹಾಗೂ ನಿ.ಪಿ-1 ರಿಂದ 8 ದಾಖಲೆಗಳನ್ನು ಆರೋಪಿತನು ನಿರ್ದಿಷ್ಟವಾಗಿ ಅಲ್ಲಗಳೆದಿರುತ್ತಾರೆ.

9. ಪಿರ್ಯಾದಿ ಪರ ವಕೀಲರು ತಮ್ಮ ವಾದಮಂಡನೆಯಲ್ಲಿ, ನಿ.ಪಿ-8ರ ಕ್ರಯಪತ್ರದಲ್ಲಿ ಕ್ರಯದ ಪ್ರತಿಫಲದ ಬಾಬ್ತು ನಿ.ಪಿ-1ರ ಚೆಕ್ಕಿನ ಸಂಖ್ಯೆಯನ್ನು ನಮೂದಿಸಿ, ಸದರಿ ಚೆಕ್ಕನ್ನು ಆರೋಪಿತನು ಫಿರ್ಯಾದಿಯ ಪರವಾಗಿ ನೀಡಿರುವುದು ಸ್ಪಷ್ಟವಾಗಿರುತ್ತದೆ. ಅದೇ ರೀತಿಯಾಗಿ, ನಿ.ಪಿ-1ರ ಚೆಕ್ಕಿನಲ್ಲಿರುವ ಆರೋಪಿತನ ಸಹಿಯನ್ನು ಸದರಿ ಆರೋಪಿತನು ಸ್ವತಃ ಒಪ್ಪಿಕೊಂಡಿರುತ್ತಾರೆ. ಸದರಿ ಕ್ರಯದ ಪ್ರತಿಫಲದ ಸಂಬಂಧ ಸೊರಬದ ನ್ಯಾಯಾಲಯದಲ್ಲಿ ಸಿವಿಲ್ ದಾವೆಯೂ ಸಹ ಆರೋಪಿ ಮತ್ತು ಫಿರ್ಯಾದಿಯ ನಡುವೆ ವಿಚಾರಣೆ ನಡೆಯುತ್ತಿರುತ್ತದೆ. ಪ್ರಸ್ತುತ ಪ್ರಕರಣವನ್ನು ಕೇವಲ ಆರೋಪಿತನಿಗೆ ಶಿಕ್ಷೆ ಕೊಡಿಸುವ ಉದ್ದೇಶದಿಂದ ಸಲ್ಲಿಸಲಾಗಿರುತ್ತದೆ. ಸದರಿ ಆರೋಪಿತನು ತನ್ನ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ತಿಳಿದಿದ್ದರೂ ಸಹ, ನಿ.ಪಿ-1ರ ಚೆಕ್ಕನ್ನು ಫಿರ್ಯಾದಿಗೆ ನೀಡಿ, ಮೋಸ ಮಾಡಿರುತ್ತಾನೆ. ಚೆಕ್ಕು ಅನಾದರಣಗೊಂಡ ಕುರಿತು ಫಿರ್ಯಾದಿಯು

ಆರೋಪಿತನಿಗೆ ಮಾಹಿತಿಯನ್ನು ನೀಡಿದ್ದರೂ ಸಹ, ಸದರಿ ನೋಟಿಸಿಗೆ ಯಾವುದೇ ಉತ್ತರವನ್ನು ನೀಡಿರುವುದಿಲ್ಲ. ಆದ್ದರಿಂದ, ಕಾನೂನಿನ ಪೂರ್ವಭಾವನೆಯು ಫಿರ್ಯಾದಿಯ ಪರವಾಗಿ ಇರುವ ಕಾರಣ ಆರೋಪಿತನನ್ನು ಶಿಕ್ಷೆಗೆ ಗುರಿಪಡಿಸುವುದರೊಂದಿಗೆ ಫಿರ್ಯಾದಿಗೆ ಕಾಯ್ದೆ ಅಡಿಯಲ್ಲಿ ಇರುವಂತೆ ದಿನಾಂಕ 19.10.2024 ರಿಂದ ವಾರ್ಷಿಕ ಶೇಕಡ 12% ರ ಬಡ್ಡಿಯಂತೆ ಮತ್ತು ಪ್ರಕರಣದ ಖರ್ಚಿನ ಬಾಬ್ತು ಒಟ್ಟು 4,50,000/- ರೂಗಳನ್ನು ದಂಡದ ರೂಪದಲ್ಲಿ ಫಿರ್ಯಾದಿಗೆ ಪರಿಹಾರವನ್ನು ಕೊಡಿಸಬೇಕೆಂದು ಸಾಧನೆ ಮಾಡಿರುತ್ತಾರೆ.

10. ಮಾನ್ಯ ಆರೋಪಿ ಪರ ವಕೀಲರು ತಮ್ಮ ವಾದ ಮಂಡನೆಯಲ್ಲಿ, ಸದರಿ ಪ್ರಕರಣದ ಫಿರ್ಯಾದಿಯು ವಾಸವಾಗಿರುವ ಮೂಡುಗೋಡು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ವಾಸವಾಗಿದ್ದು, ತಾನು ಅಡಿಕೆ ವ್ಯಾಪಾರ ಮಾಡುತ್ತಿರುವ ಕಾರಣ ಅಡಿಕೆ ಸುಲಿಯುವ ಯಂತ್ರವನ್ನು ಸ್ಥಾಪಿಸುವ ಸಲುವಾಗಿ ಜಾಗವನ್ನು ಹುಡುಕುತ್ತಿದ್ದಾಗ, ತನ್ನ ಹೆಂಡತಿಯ ಊರಾದ ಮೂಡುಗೋಡಿನ ಲಕ್ಷ್ಮಿನಾರಾಯಣ ರವರ ಸರ್ವೆ ನಂಬರ್ 1/10ರ 15 ಗುಂಟೆ ಜಾಗವನ್ನು ಅಡಿಕೆ ಸುಲಿಯುವ ಯಂತ್ರವನ್ನು ಸ್ಥಾಪಿಸುವ ಸಲುವಾಗಿ ನೋಡಿದ್ದನು. ದಿನಾಂಕ 31.07.2024 ರಂದು ಆ ಜಾಗವನ್ನು 4,50,000/- ರೂಗಳಿಗೆ ಖರೀದಿಸಲು ವ್ಯಾಪಾರ ಮಾಡಿ, ಲಿಖಿತ ಕರಾರನ್ನೂ ಸಹ ಮಾಡಿಕೊಂಡು, 2 ಲಕ್ಷ ಹಣವನ್ನು 01.08.2024 ರಂದು ಲಕ್ಷ್ಮಿನಾರಾಯಣ ರವರಿಗೆ ತನ್ನ ಕೆನರಾ ಬ್ಯಾಂಕ್ ಖಾತೆಯಿಂದ ವರ್ಗಾವಣೆ ಮಾಡಿರುತ್ತಾನೆ. 2 ಲಕ್ಷ ಮುಂಗಡವನ್ನು ಕೊಟ್ಟ ನಂತರ, ಕರಾರಿನ

ದಾಖಲೆಯನ್ನು ತನಗೆ ಕೊಡುವುದಾಗಿ ಲಕ್ಷ್ಮಿನಾರಾಯಣ ರವರು ಹೇಳಿದ್ದರೂ ಸಹ, ಸದರಿ ಕರಾರಿನ ದಾಖಲೆಯನ್ನು ತನಗೆ ಲಕ್ಷ್ಮಿನಾರಾಯಣ ರವರು ನೀಡಿರುವುದಿಲ್ಲ. ಈ ಬಗ್ಗೆ ಕೇಳಿದಾಗ, ಆ ಜಾಗವು ತನ್ನ ಮಗ ಸುಮಂತನ ಹೆಸರಿನಲ್ಲಿ ಅಂದರೆ, ಈ ಪ್ರಕರಣದ ಫಿರ್ಯಾದಿಯ ಹೆಸರಿನಲ್ಲಿ ಇದ್ದು, ಅವನು ಬಂದ ನಂತರ ಅವನ ಮೂಲಕ ಕ್ರಯಪತ್ರವನ್ನು ನೊಂದಣಿ ಮಾಡಿಸಿ ಕೊಡುತ್ತೇನೆ ಎಂದು ಹೇಳಿದ್ದು, ದಿನಾಂಕ 17.10.2024 ರಂದು ಲಕ್ಷ್ಮಿನಾರಾಯಣ ರವರು ತನಗೆ ಫೋನ್ ಮಾಡಿ, ತನ್ನ ಮಗ ಸುಮಂತನು ಬರುತ್ತಿದ್ದಾನೆ. 18.10.2024 ರಂದು ಜಮೀನನ್ನು ನೊಂದಣಿ ಮಾಡಿಸಿಕೊಳ್ಳಲು ತಯಾರಾಗಿರು ಎಂದು ಹೇಳಿ, ನೊಂದಣಿ ಪತ್ರವನ್ನು ತಾನೇ ತಯಾರು ಮಾಡುತ್ತೇನೆ ಎಂದು ಹೇಳಿದ್ದರು. ಅದರಂತೆ ದಿನಾಂಕ 18.10.2024 ರಂದು ತಾನು ಸೊರಬದ ಉಪನೊಂದಣಾಧಿಕಾರಿಗಳ ಕಚೇರಿಗೆ ತನ್ನ ಗುರುತಿನ ಚೀಟಿ ಮತ್ತು ಆಧಾರ್ ಕಾರ್ಡ್‌ನೊಂದಿಗೆ ಹೋಗಿದ್ದು, ಲಕ್ಷ್ಮಿನಾರಾಯಣ ರವರು ತಯಾರು ಮಾಡಿದ ಕ್ರಯಪತ್ರವನ್ನು ಓದಿದಾಗ, ಕ್ರಯದ ಪ್ರತಿಫಲ 4,50,000/- ಎಂದು ಬರೆದಿದ್ದು, ಅದರಲ್ಲಿ ಲಕ್ಷ್ಮಿನಾರಾಯಣ ರವರಿಗೆ ತಾನು ಮುಂಗಡವಾಗಿ ಕೊಟ್ಟಿದ್ದ ಎರಡು ಲಕ್ಷ ಹಣವನ್ನು ನಮೂದು ಮಾಡಿರಲಿಲ್ಲ. ಈ ಬಗ್ಗೆ ವಿಚಾರಿಸಿದಾಗ ತನ್ನ ಮಗ ಸುಮಂತನ ಹೆಸರಿನಲ್ಲಿ ಸದರಿ ಜಾಗವು ಇರುವ ಕಾರಣ, ಪೂರ್ತಿ ಹಣವನ್ನು ಅವನಿಗೆ ಕೊಟ್ಟ ನಂತರ 2 ಲಕ್ಷ ಮುಂಗಡ ಹಣವನ್ನು ವಾಪಸ್ಸು ನಂತರ ಕೊಡುತ್ತೇನೆ ಎಂದು ಹೇಳಿದರು. ಆಗ 2 ಲಕ್ಷ ಹಣವನ್ನು ಆರೋಪಿತನ ಖಾತೆಗೆ ಜಮಾ ಮಾಡಿದ ನಂತರ, ಕ್ರಯದ ಪ್ರತಿಫಲವಾಗಿ 4,50,000/- ರೂಗಳನ್ನು ಕೊಡುವ

ಸಂಬಂಧ ನೀಡಿರುವ ಚೆಕ್ಕನ್ನು ನಗದೀಕರಣಕ್ಕೆ ಹಾಜರುಪಡಿಸುತ್ತೇವೆ ಎಂದು ಫಿರ್ಯಾದಿ ಮತ್ತು ಅವರ ತಂದೆ ಲಕ್ಷ್ಮಿನಾರಾಯಣ ರವರು ಹೇಳಿದ್ದರು. ಸದರಿ ಮುಂಗಡ ಹಣವನ್ನು ವಾಪಸ್ಸು ನೀಡದೆ ನಿ.ಪಿ–1ರ ಚೆಕ್ಕನ್ನು ಬ್ಯಾಂಕಿಗೆ ಹಾಜರುಪಡಿಸಿ, ನೋಟಿಸನ್ನು ವಕೀಲರಿಂದ ಫಿರ್ಯಾದಿಯು ಕೊಟ್ಟಿರುತ್ತಾರೆ. ಅಲ್ಲದೆ, ಸೊರಬದ ತಹಸೀಲ್ದಾರ್ ಕಚೇರಿಯಲ್ಲಿ ಕ್ರಯಪತ್ರದ ಅನ್ವಯ ಖಾತೆ ಬದಲಾವಣೆಯಾಗದಂತೆ ಫಿರ್ಯಾದಿ ಮತ್ತು ಅವರ ತಂದೆ ತಕರಾರನ್ನು ಹಾಕಿರುತ್ತಾರೆ. ಆ ನಂತರವೂ ಸಹ ತಾನು ಮುಂಗಡ ಹಣವನ್ನು ವಾಪಸ್ಸು ಕೊಟ್ಟರೆ ಕ್ರಯದ ಪ್ರತಿಫಲವನ್ನು ಕೊಡುವುದಾಗಿ ತಿಳಿಸಿದ್ದು, ಜಮೀನಿನ ಬೆಲೆ ಹೆಚ್ಚಾಗಿರುವ ಕಾರಣ ಹೆಚ್ಚಿನ ಹಣವನ್ನು ಪಡೆದುಕೊಳ್ಳಬೇಕೆಂದು ಫಿರ್ಯಾದಿಯು ಆರೋಪಿತನ ವಿರುದ್ಧ ಈ ಪ್ರಕರಣವನ್ನು ದಾಖಲು ಮಾಡಿದ್ದಾರೆ. ಆದ್ದರಿಂದ, ಸದರಿ ಆರೋಪಿತನು ನಿರಪರಾಧಿ ಎಂದು ಅವನನ್ನು ನಿರ್ದೋಷಿ ಎಂದು ಪರಿಗಣಿಸಿ ಬಿಡುಗಡೆ ಮಾಡಬೇಕೆಂದು ಸಾಧನೆ ಮಾಡಿರುತ್ತಾರೆ.

11. ಪಿರ್ಯಾದಿಯು ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲನೆ ಮಾಡಲಾಗಿ ನಿ.ಪಿ–1 ಇದು ಸಾಗರದ ಕೆನರಾ ಬ್ಯಾಂಕ್ ಶಾಖೆಯ ಆರೋಪಿತನ ಖಾತೆಗೆ ಸಂಬಂಧಪಟ್ಟ ಚೆಕ್ಕು ಆಗಿದ್ದು, ಅದನ್ನು ದಿನಾಂಕ 19–10–2024 ರಂದು ನಗದೀಕರಣವಾಗುವಂತೆ 4,50,000/– ರೂಗಳಿಗಾಗಿ ಫಿರ್ಯಾದಿಯ ಪರವಾಗಿ ನೀಡಿರುವುದಾಗಿ ಪಿ.ಡಬ್ಲ್ಯೂ 1 ಮತ್ತು 2 ರವರು ತಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರಗಳಲ್ಲಿ ಹೇಳಿದ್ದಾರೆ. ಸದರಿ ಚೆಕ್ಕಿನಲ್ಲಿರುವ ಆರೋಪಿತನ ಸಹಿಯನ್ನು ನಿ.ಪಿ–1(ಎ) ಎಂದು ಗುರುತಿಸಿದ್ದು, ಸದರಿ

ಚೆಕ್ಕನ್ನು ನೀಡಿರುವುದನ್ನು ಆರೋಪಿತನು ಸ್ವತಃ ಒಪ್ಪಿಕೊಂಡಿರುತ್ತಾರೆ. ಈ ಬಗ್ಗೆ ನಿ.ಪಿ–8 ರ ನೊಂದಾಯಿತ ಕ್ರಯಪತ್ರದಲ್ಲಿಯೂ ಸಹ, ಸ್ಪಷ್ಟವಾಗಿ ಉಲ್ಲೇಖಿಸಲಾಗಿರುತ್ತದೆ. ನಿ.ಪಿ–2 ಇದು ಸಾಗರದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ರವರು ನೀಡಿರುವ ಹಿಂಬರಹವಾಗಿದ್ದು, ನಿ.ಪಿ–1 ರ ಚೆಕ್ಕು ನಿ.ಪಿ–2 ರಂತೆ ಆರೋಪಿತನ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂಬ ಕಾರಣಕ್ಕಾಗಿ ಅನಾದರಣಗೊಂಡಿರುತ್ತದೆ. ನಿ.ಪಿ–3 ಇದು ದಿನಾಂಕ 06.11.2024 ರಂದು ಆರೋಪಿತನಿಗೆ ಫಿರ್ಯಾದಿಯು ತಮ್ಮ ವಕೀಲರಿಂದ ಕೊಡಿಸಿದ ನೋಟೀಸಿನ ಪ್ರತಿಯಾಗಿದ್ದು, ಸದರಿ ನೋಟೀಸು ನಿ.ಪಿ–5 ರಂತೆ ಆರೋಪಿತನಿಗೆ ಜಾರಿಯಾಗಿರುತ್ತದೆ. ನಿ.ಪಿ–7 ಇದು ಪಿ.ಡಬ್ಲ್ಯೂ 2 ರವರು ಫಿರ್ಯಾದಿಗಳಿಂದ ಪಡೆದುಕೊಂಡ ಅಧಿಕಾರ ಪತ್ರವಾಗಿರುತ್ತದೆ. ನಿ.ಪಿ–8 ಕ್ರಯಪತ್ರವಾಗಿರುತ್ತದೆ. ಸದರಿ ಪ್ರಕರಣದಲ್ಲಿ ಕಾಯಿದೆಯು ಅಗತ್ಯಪಡಿಸಿದಂತೆ ಫಿರ್ಯಾದಿದಾರರು ಲಿಖಿತ ಪತ್ರಗಳ ವರ್ಗಾವಣೆ ಕಾಯ್ದೆಯ ಕಲಂ 138 ಎ, ಬಿ ಮತ್ತು ಸಿ ನ ಅಡಿಯಲ್ಲಿನ ಅವಶ್ಯಕತೆಗಳನ್ನು ಪೂರೈಸಿರುತ್ತಾರೆ. ನಿ.ಪಿ–3 ರ ನೋಟೀಸಿಗೆ ಆರೋಪಿತನು ಯಾವುದೇ ಉತ್ತರವನ್ನು ನೀಡಿರುವುದಿಲ್ಲ. ಆದ್ದರಿಂದ, ಪ್ರಸ್ತುತ ದೂರನ್ನು ನ್ಯಾಯಾಲಯದಲ್ಲಿ ಫಿರ್ಯಾದಿದಾರರು ನಿಗದಿತ ಕಾಲಾವಧಿಯಲ್ಲಿ ಸಲ್ಲಿಸಿರುವುದರಿಂದ ಮತ್ತು ಕಾಯಿದೆಯು ಅಗತ್ಯಪಡಿಸಿದ ಎಲ್ಲಾ ಸಂಗತಿಗಳನ್ನು ಫಿರ್ಯಾದಿದಾರರು ಸಾಭೀತುಪಡಿಸಿರುವುದರಿಂದ, ಫಿರ್ಯಾದಿಯ ಪರವಾಗಿ ಲಿಖಿತ ಪತ್ರಗಳ ವರ್ಗಾವಣೆ ಕಾಯ್ದೆಯ ಕಲಂ 139 ಮತ್ತು 118(A) ನಂತೆ ಪ್ರತಿಯೊಂದು ಲಿಖಿತ ಪತ್ರವು ಪ್ರತಿಫಲಕ್ಕಾಗಿ ನೀಡಿರುತ್ತಾರೆ ಎಂಬುದಾಗಿ ಪೂರ್ವ ಭಾವನೆ

ಮಾಡಬಹುದಾಗಿದ್ದು, ಈ ಪ್ರಕರಣದಲ್ಲೂ ಸಹ, ಫಿರ್ಯಾದಿಯ ಪರವಾಗಿ ಪೂರ್ವ ಭಾವನೆಯನ್ನು ಮಾಡಬಹುದಾಗಿರುತ್ತದೆ.

12. ಆರೋಪಿತನ ನಿರ್ದಿಷ್ಟ ಪ್ರತಿರಕ್ಷೆಯಂತೆ, ತಾನು ಕೇವಲ 2.5 ಲಕ್ಷ ರೂಗಳನ್ನು ಮಾತ್ರ ಫಿರ್ಯಾದಿದಾರರಿಗೆ ಸರ್ವೆ ನಂಬರ್ 1/10 ರ ಜಮೀನು ಖರೀದಿ ಬಾಬ್ತು ನೀಡಬೇಕಾಗಿದ್ದು, ಈಗಾಗಲೇ ಖರೀದಿ ಮಾತುಕತೆ ಕಾಲಕ್ಕೆ ಮುಂಗಡವಾಗಿ 2 ಲಕ್ಷ ರೂಗಳನ್ನು ಫಿರ್ಯಾದಿದಾರರ ತಂದೆಯಾದ ಪಿ.ಡಬ್ಲ್ಯೂ-2 ರವರಿಗೆ ನೀಡಿರುತ್ತೇನೆ ಎಂಬುದಾಗಿರುತ್ತದೆ. ಈ ಕುರಿತಂತೆ ಆರೋಪಿತನು ಪಿ.ಡಬ್ಲ್ಯೂ-1 ಎಂದು ವಿಚರಣೆಗೆ ಒಳಪಡಿಸಿಕೊಂಡು ತನ್ನ ಪ್ರತಿರಕ್ಷೆಯನ್ನು ವಿವರವಾಗಿ ತಿಳಿಸಿರುತ್ತಾನೆ. ಫಿರ್ಯಾದಿದಾರರ ಪರವಾಗಿ ಇರುವಂತಹ ಪೂರ್ವಭಾವನೆಯನ್ನು ಖಂಡಿಸಲು ಆರೋಪಿತನು ಕಡ್ಡಾಯವಾಗಿ ಕಟಕಟೆಗೆ ಬರಬೇಕೆಂಬ ನಿಯಮ ಇರುವುದಿಲ್ಲ. ಪಿ.ಡಬ್ಲ್ಯೂ-1 ರವರ ಪಾಟೀ ಸವಾಲಿನ ಮೂಲಕವೂ ಸಹ ತನ್ನ ಪ್ರತಿರಕ್ಷೆಯನ್ನು ಸಿದ್ಧಪಡಿಸಬಹುದಾಗಿರುತ್ತದೆ.

13. ಆರೋಪಿತನು ಹೇಳುವಂತೆ, ಫಿರ್ಯಾದಿದಾರರೊಂದಿಗೆ ತಾನು ಕ್ರಯದ ವ್ಯವಹಾರವನ್ನು ಮಾಡಿರುವುದಿಲ್ಲ. ಬದಲಾಗಿ ಅವರ ತಂದೆ ಅಂದರೆ, ಪಿ.ಡಬ್ಲ್ಯೂ-2 ರವರೊಂದಿಗೆ ಸರ್ವೆ ನಂಬರ್ 1/10 ರ 15 ಗುಂಟೆ ಜಾಗದ ಕ್ರಯದ ವ್ಯವಹಾರವನ್ನು ಮಾಡಿದ್ದು, ದಿನಾಂಕ 01.08.2024 ರಂದು ಅವರಿಗೆ ಕ್ರಯದ ಪ್ರತಿಫಲ ಪೈಕಿ 2 ಲಕ್ಷ ರೂಗಳನ್ನು ಮುಂಗಡವಾಗಿ ಪಾವತಿಸಿರುವುದಾಗಿ ಹೇಳಿದ್ದಾರೆ. ಈ ಬಗ್ಗೆ ನಿ.ಪಿ-1 ರಂತೆ ಆರೋಪಿತನು ತನ್ನ ಖಾತೆಗೆ ಸಂಬಂಧಪಟ್ಟ ಸ್ಟೇಟ್ಮೆಂಟ್ ಆಫ್ ಅಕೌಂಟ್ಸ್ ಅನ್ನು ಹಾಜರಪಡಿಸಿದ್ದು, ಸದರಿ

ದಾಖಲೆಯಂತೆ ದಿನಾಂಕ 01.08.2024 ರಂದು 2 ಲಕ್ಷ ರೂಗಳನ್ನು ನೆಫ್ಟ್ ಮೂಲಕ ಪಿ.ಡಬ್ಲ್ಯೂ-2 ಅಂದರೆ ಫಿರ್ಯಾದಿದಾರರ ತಂದೆಯ ಖಾತೆಗೆ ವರ್ಗಾವಣೆ ಮಾಡಿರುತ್ತಾರೆ ಎಂಬುದು ಕಂಡುಬರುತ್ತದೆ. ಸದರಿ ಹಣವನ್ನು ನಿವೇಶನದ ಖರೀದಿ ಬಾಬ್ತು ಪಾವತಿ ಮಾಡಿರುವುದಾಗಿ ಆರೋಪಿತನು ಹಾಜರಪಡಿಸಿರುವ ನಿ.ಡಿ-3 ರಿಂದ 5 ರ ದಾಖಲೆಗಳಲ್ಲಿ ಸ್ಪಷ್ಟವಾಗಿ ಕಾಣಿಸಿರುತ್ತಾರೆ. ನಿ.ಡಿ-3 ರಲ್ಲಿ ಮುಂಗಡ ಹಣವಾಗಿ ನೀಡಿರುವ 2 ಲಕ್ಷ ರೂಗಳನ್ನು ಹಾಗೂ ನಿ.ಡಿ-4 ಮತ್ತು 5 ರಲ್ಲಿ ನಿವೇಶನ ಖರೀದಿ ಬಾಬ್ತು 4,50,000/- ರೂಗಳನ್ನು ಹೂಡಿಕೆ ಮಾಡಿರುವುದಾಗಿ ಸ್ಪಷ್ಟವಾಗಿ ನಮೂದಿಸಲಾಗಿರುತ್ತದೆ.

14. ತನ್ನ ಪ್ರತಿರಕ್ಷೆಗೆ ಪೂರಕವಾಗಿ ಪಿ.ಡಬ್ಲ್ಯೂ-2 ರವರ ಪಾಟೀ ಸವಾಲಿನಲ್ಲಿ ಸದರಿ ಪಿ.ಡಬ್ಲ್ಯೂ- 2 ರವರು ದಿನಾಂಕ 01.08.2024 ರಂದು 2 ಲಕ್ಷ ರೂಗಳನ್ನು ತನ್ನ ಖಾತೆಗೆ ಆರೋಪಿತನು ಮುಂಗಡವಾಗಿ ನಿವೇಶನ ಖರೀದಿ ಬಾಬ್ತು ಜಮಾ ಮಾಡಿದ್ದಾರೆ ಎಂದರೆ ಅದು ಅಡಿಕೆ ಖರೀದಿ ಮಾಡಿದ ಹಣ ಎಂಬುವುದಾಗಿ ಹೇಳಿಕೆ ನೀಡಿದ್ದಾರೆ. ದೂರಿನ ಸಂಗತಿಗಳನ್ನು ಹಾಗೂ ಪಿ.ಡಬ್ಲ್ಯೂ- 1 ಮತ್ತು 2 ರವರ ಮುಖ್ಯ ವಿಚಾರಣಾ ಹೇಳಿಕೆಗಳನ್ನು ಗಮನಿಸಿದಾಗ, ಈ ಪ್ರಕರಣದಲ್ಲಿ ಹೇಳಿರುವ ನಿವೇಶನದ ವ್ಯವಹಾರವನ್ನು ಮಾಡುವ ಪೂರ್ವದಲ್ಲಿ ತಮ್ಮ ಮತ್ತು ಆರೋಪಿತನ ನಡುವೆ ಅಡಿಕೆ ವ್ಯವಹಾರ ನಡೆದಿತ್ತು ಎನ್ನುವುದಾಗಿ ಯಾವುದೇ ಹೇಳಿಕೆಗಳು ಇರುವುದಿಲ್ಲ.

15. ಪಿ.ಡಬ್ಲ್ಯೂ- 2 ರವರು ಆರೋಪಿತನು ತನಗೆ ಹತ್ತು ವರ್ಷಗಳಿಂದ ಪರಿಚಯವಾಗಿದ್ದು, ಸದರಿ ಪರಿಚಯದ ಅವಧಿಯಲ್ಲಿ ಅಡಿಕೆಯನ್ನು 2-3 ಮೂರು ಬಾರಿ ಖರೀದಿ

ಮಾಡಿದ್ದಾನೆ ಎಂದು ಹೇಳಿಕೆ ನೀಡಿದ್ದಾರೆ. ಸದರಿ ಅಡಿಕೆ ಖರೀದಿಗೆ ಸಂಬಂಧಪಟ್ಟಂತೆ ಯಾವ ವರ್ಷ ಅಡಿಕೆಯ ವ್ಯವಹಾರವಾಯಿತು ಎಂಬುದು ತನಗೆ ನೆನಪಿಲ್ಲ ಎಂಬುದಾಗಿ ಹೇಳಿದ್ದಾರೆ. ಅದೇ ರೀತಿಯಾಗಿ, 2024 ರಲ್ಲಿ 50,000/- ರೂಗಳಂತೆ 4 ಕ್ವಿಂಟಲ್ ಅಡಿಕೆಯನ್ನು ಆರೋಪಿತನಿಗೆ ತಾನು ಮಾರಿದಿರುವುದಾಗಿ ಹೇಳಿದ್ದಾರೆ. ಆರೋಪಿತನು ಖರೀದಿ ಮಾಡಿದ ಅಡಿಕೆಯನ್ನು ಹೇಗೆ ತೆಗೆದುಕೊಂಡು ಹೋದ ಎಂದು ತನಗೆ ಗೊತ್ತಿಲ್ಲ ಎಂಬುದಾಗಿ ಮತ್ತು ತಾನು ಮಾರಿದ ಅಡಿಕೆ ತನ್ನ ಮನೆಯ ಮುಂದೆಯೇ ಇತ್ತು ಎಂಬುದಾಗಿ ಹೇಳಿಕೆ ನೀಡಿದ್ದಾರೆ. ಒಂದು ವೇಳೆ, ಸದರಿ ಅಡಿಕೆಯನ್ನು ಆರೋಪಿತನು ಪಿ.ಡಬ್ಲ್ಯೂ-2 ರವರಿಂದ ಖರೀದಿ ಮಾಡಿದ್ದರೆ, ಈ ಕುರಿತು ಹೇಗೆ ತೆಗೆದುಕೊಂಡು ಹೋದನು ಎನ್ನುವ ಬಗ್ಗೆ ಮಾಹಿತಿ ಇರುತ್ತದೆ. ಅದೇ ರೀತಿಯಾಗಿ, ಸದರಿ ಪಿ.ಡಬ್ಲ್ಯೂ-2 ರವರು ಅಡಿಕೆಯನ್ನು ಹೇಗೆ ತೆಗೆದುಕೊಂಡು ಹೋದನು ಎನ್ನುವ ಬಗ್ಗೆ ಮಾಹಿತಿ ಇಲ್ಲ ಎಂದು ಹೇಳುವ ಕ್ರಮವನ್ನು ಗಮನಿಸಿದಾಗ, ಸದರಿ ಪಿರ್ಯಾದಿಯು ಸಂಗತಿಗಳನ್ನು ಮರೆಮಾಚುತ್ತಿದ್ದಾನೆ ಎಂಬುದು ಕಂಡುಬರುತ್ತದೆ.

16. ಅದೇ ರೀತಿಯಾಗಿ, ದಿನಾಂಕ 31.02.2024 ರಂದು ತನ್ನ ಮತ್ತು ಆರೋಪಿತನ ನಡುವೆ ಜಮೀನಿನ ಕ್ರಯದ ವ್ಯವಹಾರ ತಮ್ಮ ಮನೆಯಲ್ಲೇ ಆಯಿತು ಎಂಬುದಾಗಿ ಸ್ವತಃ ಪಿ.ಡಬ್ಲ್ಯೂ- 2 ರವರು ಒಪ್ಪಿಕೊಂಡು, ಆಗ ತಾನು ಮತ್ತು ಆರೋಪಿತನು ಮಾತ್ರ ಇದ್ದೆವು ಎಂಬುದನ್ನು ಒಪ್ಪಿಕೊಂಡಿದ್ದಾರೆ. ಸದರಿ ಪಿ.ಡಬ್ಲ್ಯೂ-2 ರವರು ನಿ.ಡಿ-1 ರಂತೆ ದಿನಾಂಕ 01.08.2024 ರಂದು 2 ಲಕ್ಷ ಹಣವು ಆರೋಪಿತನ ಖಾತೆಯಿಂದ ತನ್ನ ಖಾತೆಗೆ ಜಮಾ

ಆಗಿತ್ತು. ಅದು ಅಡಿಕೆ ಖರೀದಿ ಬಾಬ್ತು ಹಣ ಮುಂಗಡ ಹಣ ಎಂಬುವುದಾಗಿ ಹೇಳಿದ್ದಾರೆ. ಆದರೆ, ಸದರಿ ಅಡಿಕೆ ಖರೀದಿಗೆ ಸಂಬಂಧಪಟ್ಟಂತೆ ಹಾಗೂ ಫಿರ್ಯಾದಿಯು ಅಡಿಕೆ ಬೆಳೆಯುವ ಜಮೀನನ್ನು ಹೊಂದಿರುವ ಬಗ್ಗೆ ಯಾವುದೇ ಸಾಕ್ಷಾಧಾರಗಳನ್ನು ನ್ಯಾಯಾಲಯದ ಮುಂದೆ ಹಾಜರಪಡಿಸಿರುವುದಿಲ್ಲ. ಅದೇ ರೀತಿಯಾಗಿ, ಸದರಿ ದಿನಾಂಕ 01.08.2024 ರಂದು ಹಾಗೂ ಅದರ ಪೂರ್ವದಲ್ಲಿ ಆರೋಪಿತನಿಗೆ ಅಡಿಕೆಯನ್ನು ತಾನು ಮಾರಾಟ ಮಾಡಿದ ಕುರಿತು ತನ್ನ ಬಳಿ ದಾಖಲೆಗಳು ಇಲ್ಲ ಎಂಬುದಾಗಿ ಹೇಳಿಕೆ ನೀಡಿರುತ್ತಾರೆ. ಸದರಿ ಪಿ.ಡಬ್ಲ್ಯೂ- 2 ರವರು ಯಾವುದೇ ಮುಂಗಡ ಹಣವನ್ನು ಪಡೆಯದೆ ಆರೋಪಿತನಿಗೆ ನಿ.ಪಿ-8 ರಂತೆ ಕ್ರಯಪತ್ರವನ್ನು ಮಾಡಿಕೊಟ್ಟಿದ್ದೇವೆ ಎಂಬುದಾಗಿ ಹೇಳಿಕೆ ನೀಡಿದ್ದಾರೆ. ಸಾಮಾನ್ಯವಾಗಿ, ಯಾವುದೇ ಕ್ರಯದ ವ್ಯವಹಾರವನ್ನು ಮಾಡುವ ಮೊದಲು ಕ್ರಯದ ಪ್ರತಿಫಲವಾಗಿ ಇಂತಿಷ್ಟು ಮುಂಗಡ ಹಣ ಎಂಬುದಾಗಿ ಪಡೆದುಕೊಳ್ಳುತ್ತಾರೆ. ಈ ಪ್ರಕರಣದಲ್ಲಿ ಯಾವುದೇ ಮುಂಗಡ ಹಣವನ್ನು ಪಡೆದುಕೊಳ್ಳದೆ ಇದ್ದರೆ, ಆ ಸಂದರ್ಭದಲ್ಲಿ ಕೇವಲ ಕರಾರನ್ನು ಮಾತ್ರ ಮಾಡಿಕೊಳ್ಳಲಾಗುತ್ತದೆ ಹೊರತು, ಸಂಪೂರ್ಣ ಹಣವನ್ನು ಸಾಲ ಉಳಿಸಿಕೊಂಡು ಕ್ರಯಪತ್ರವನ್ನು ಯಾವುದೇ ಸಾಮಾನ್ಯ ಜ್ಞಾನವುಳ್ಳ ವ್ಯಕ್ತಿಯೂ ಕ್ರಯಪತ್ರವನ್ನು ಮಾಡಿಕೊಳ್ಳುವುದಿಲ್ಲ.

17. ಆರೋಪಿತನ ಪ್ರತಿರಕ್ಷೆಯಂತೆ ಸದರಿ ಮೂಡುಗೋಡು ಗ್ರಾಮದ ಸರ್ವೆ ನಂಬರ್ 1/10 ರ ಕ್ರಯದ ಮಾತುಕತೆ ಪಿ.ಡಬ್ಲ್ಯೂ-2 ಮತ್ತು ಆರೋಪಿತನ ನಡುವೆ ನಡೆದಿರುತ್ತದೆ ಹೊರತು, ಪಿ.ಡಬ್ಲ್ಯೂ-1 ಅಂದರೆ ಈ ಪ್ರಕರಣದ ಫಿರ್ಯಾದಿಯೊಂದಿಗೆ ನಡೆದಿರುವುದಿಲ್ಲ.

ಅದೇ ರೀತಿಯಾಗಿ, ಸದರಿ ಪಿ.ಡಬ್ಲ್ಯೂ-1 ರವರ ಪಾಟೀ ಸವಾಲಿನ 6 ನೇ ಪುಟದ 1 ನೇ ಸಾಲಿನಲ್ಲಿ,

> **"ದಿನಾಂಕ 12.10.2024 ರಂದು ಫಿರ್ಯಾದಿಯು ಬೆಂಗಳೂರಿನಿಂದ ಬಂದಿದ್ದಾನೆ ನೊಂದಣಿ ಮಾಡಿಕೊಳ್ಳೋಣ ಎಂದು ನಾನು ಆರೋಪಿತನಿಗೆ ತಿಳಿಸಿದ್ದು, ಆ ದಿನ ಕ್ರಯಪತ್ರ ನೊಂದಣಿ ಆಗಲಿಲ್ಲ ಎಂದರೆ ಸರಿ. ದಿನಾಂಕ 18.10.2024 ರಂದು ಕ್ರಯಪತ್ರ ನೊಂದಣಿಯಾಗಿದೆ ಎಂದರೆ ಸರಿ. ಕ್ರಯದ ಪ್ರತಿಫಲದ ಪೈಕಿ 2,00,000/- ರೂಗಳನ್ನು ಈಗಾಗಲೇ ಆರೋಪಿತನು ನನಗೆ ಖಾತೆ ಮೂಲಕ ವರ್ಗಾವಣೆ ಮಾಡಿದ್ದು, ಇನ್ನು 2,50,000/- ರೂಗಳು ಮಾತ್ರ ಕೊಡುವುದು ಬಾಕಿ ಇದೆ ಎಂದರೆ ನನಗೆ ಗೊತ್ತಿಲ್ಲ"**

ಎಂಬುದಾಗಿ ಹೇಳಿಕೆ ನೀಡಿದ್ದಾರೆ. ಆದರೆ, ಸದರಿ ಸಂಗತಿಯನ್ನು ಫಿರ್ಯಾದಿದಾರರು/ ಪಿ.ಡಬ್ಲ್ಯೂ-2 ರವರು ಅಲ್ಲಗಳೆದಿರುವುದಿಲ್ಲ. ಆದಕಾರಣ, ಸದರಿ ಸಂಗತಿಯು ಆರೋಪಿತನು ತೆಗೆದುಕೊಂಡ ಪ್ರತಿರಕ್ಷೆಗೆ ಪೂರಕವಾಗಿರುತ್ತದೆ.

18. ಸದರಿ ಪಾಟೀ ಸವಾಲಿನ 6 ನೇ ಪುಟದ 1 ನೇ ಖಂಡಿಕೆಯ ಕೊನೆಯ 3 ನೇ ಸಾಲಿನಲ್ಲಿ,

> **"ನಿ.ಪಿ. 1 ಅನ್ನು ಫಿರ್ಯಾದಿ ಸುಮುಖ ಬರೆದಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. ನಿ.ಪಿ.1 ಅನ್ನು ನನ್ನ ಮಗ ಬರೆದಿದ್ದಾನೆ ಅಥವಾ ಅಲ್ಲ ಎಂದು ಫಿರ್ಯಾದಿದಾರರನ್ನು ಸಾಕ್ಷಿ ಮಾಡಿಸಲು ಆಗುವುದಿಲ್ಲ"**

ಎಂಬುದಾಗಿ ಪಿ.ಡಬ್ಲ್ಯೂ-2 ರವರು ಹೇಳಿಕೆ ನೀಡಿದ್ದಾರೆ. ಅಂದರೆ ನಿ.ಪಿ.1 ರ ಚಕ್ಕನ್ನು ಫಿರ್ಯಾದಿಯ ಪರವಾಗಿ ಆರೋಪಿತನು ನಿ.ಪಿ.8 ನೊಂದಣಿ ಕಾಲಕ್ಕೆ ನೀಡಿದ್ದಾಗ ಅದನ್ನು ಸಂಪೂರ್ಣವಾಗಿ ತುಂಬಿರಲಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಲಿಖಿತ ಪತ್ರಗಳ ವರ್ಗಾವಣೆ

ಕಾಯ್ದೆಯ ಕಲಂ 20 ರಂತೆ ಅಪರಿಪೂರ್ಣವಾದ ಒಂದು ಲಿಖಿತ ಪತ್ರವನ್ನು ಅದರ ದಾರಕನು ಸಹಿ ಮಾಡಿ ಮತ್ತೊಬ್ಬ ವ್ಯಕ್ತಿಗೆ ಕೊಟ್ಟರೆ ಅದನ್ನು ಪೂರ್ಣಗೊಳಿಸುವ ಅಧಿಕಾರವನ್ನು ಅದನ್ನು ಪಡೆದ ವ್ಯಕ್ತಿಗೆ ಇರುತ್ತದೆ ಎಂದು ಕಾಯ್ದೆಯಲ್ಲಿ ಸ್ಪಷ್ಟವಾಗಿದ್ದರೂ ಸಹ, ಈ ಪ್ರಕರಣದಲ್ಲಿ ಅದನ್ನು ಯಾರು ಬರೆದಿದ್ದಾರೆ ಎಂಬುದಾಗಿ ಸ್ವತಃ ಫಿರ್ಯಾದಿದಾರರು ಪಿ.ಡಬ್ಲ್ಯೂ-2 ರವರ ಮಗನಾಗಿದ್ದು, ಅವರನ್ನು ಸಾಕ್ಷಿ ಮಾಡಿಸಲು ಆಗುವುದಿಲ್ಲ ಎಂದು ಹೇಳಿರುವ ಸದರಿ ಪಿ.ಡಬ್ಲ್ಯೂ-2 ರವರ ಹೇಳಿಕೆಯನ್ನು ಗಮನಿಸಿದಾಗ, ಫಿರ್ಯಾದಿಯ ಪ್ರಕರಣದ ಕುರಿತು ಸಂಶಯ ಉಂಟಾಗುತ್ತದೆ.

19. ಅದೇ ರೀತಿಯಾಗಿ, ಪಿ.ಡಬ್ಲ್ಯೂ-2 ರವರ ಪಾಟೀ ಸವಾಲಿನ 6 ನೇ ಪುಟದ 3 ನೇ ಖಂಡಿಕೆಯಲ್ಲಿ

> **"ಕ್ರಯಪತ್ರ ನೊಂದಣಿಯಾದ ನಂತರ ಸ್ವತ್ತಿನ ಖರೀದಿದಾರರು ಅಸಲು ಕ್ರಯಪತ್ರವನ್ನು ತೆಗೆದುಕೊಂಡು ಹೋಗುತ್ತಾರೆ ಎಂದರೆ ಸರಿ. ನೊಂದಣಿಯಾದ ದಿನದಂದು ಅಸಲು ಕ್ರಯಪತ್ರವನ್ನು ಆರೋಪಿತನಿಗೆ ನಾನು ಕೊಟ್ಟಿಲ್ಲ ಎಂದರೆ ಸರಿ. ಆ ಕ್ರಯಪತ್ರವು ಈಗ ನನ್ನ ಬಳಿ ಇಲ್ಲ ಅದನ್ನು ಕೋರ್ಟಿಗೆ ಹಾಕಿದ್ದೇನೆ. ಆ ಕ್ರಯಪತ್ರದ ಆಧಾರದ ಮೇಲೆ ಖಾತೆ ಬದಲಾವಣೆ ಮಾಡಬೇಡಿ ಎಂದು ನಾನು ತಕರಾರನ್ನು ತಹಸೀಲ್ದಾರವರಿಗೆ ಕೊಟ್ಟಿದ್ದೇನೆ ಎಂದರೆ ಸರಿ"**

ಎಂದು ಒಪ್ಪಿಕೊಂಡಿದ್ದಾರೆ. ಈ ಪ್ರಕರಣದಲ್ಲಿ ಮೂಡುಗೋಡು ಗ್ರಾಮದ ಸರ್ವೆ ನಂಬರ್ 1/10 ರ 15 ಗುಂಟೆ ಜಮೀನನ್ನು ಫಿರ್ಯಾದಿದಾರರು ಆರೋಪಿತನಿಗೆ ನಿ.ಪಿ.8 ರಂತೆ ಮಾರಾಟ ಮಾಡಿದ್ದರೂ ಸಹ, ಮೂಲ ಕ್ರಯಪತ್ರವನ್ನು ಪಿ.ಡಬ್ಲ್ಯೂ-2 ರವರು ತಮ್ಮ ಬಳಿ ಏಕೆ ಇರಿಸಿಕೊಂಡಿದ್ದಾರೆ ಎನ್ನುವ ಬಗ್ಗೆ ಯಾವುದೇ ವಿವರಗಳು ಪಿ.ಡಬ್ಲ್ಯೂ-2 ರವರು

ನೀಡಿರುವುದಿಲ್ಲ. ಇದರಿಂದಲೂ ಸಹ, ಸದರಿ ಕ್ರಯದ ಬಾಬ್ತು ಫಿರ್ಯಾದಿದಾರರ ತಂದೆ ಪಿ.ಡಬ್ಲ್ಯೂ-2 ರವರು ಸದರಿ ಆರೋಪಿತನು ತನ್ನ ಪ್ರತಿರಕ್ಷೆಯಲ್ಲಿ ಹೇಳಿದಂತೆ, 2,00,000/- ರೂಗಳನ್ನು ಮುಂಗಡವಾಗಿ ಪಡೆದುಕೊಂಡಿದ್ದು, ಹೆಚ್ಚಿನ ಲಾಭ ಪಡೆಯಬೇಕೆನ್ನುವ ಉದ್ದೇಶದಿಂದ ಈ ಪ್ರಕರಣವನ್ನು ದಾಖಲಿಸಿರುವ ಸಾಧ್ಯತೆ ಇದೆ ಎಂಬುದರಲ್ಲಿ ಸ್ಪಷ್ಟವಾಗುತ್ತದೆ.

19. ದಿನಾಂಕ 04.12.2025 ರಂದು ಪಿ.ಡಬ್ಲ್ಯೂ-2 ರವರನ್ನು ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದ ಸಂದರ್ಭದಲ್ಲಿ 4,50,000/- ರೂಗಳು ತನಗೆ ತೃಪ್ತಿದಾಯಕವಾದ ಕಾರಣ ತಾನು ಆರೋಪಿತನ ಪರವಾಗಿ ಕ್ರಯಪತ್ರವನ್ನು ಬರೆದು ನೊಂದಣಿ ಮಾಡಿಸಿದ್ದೇನೆ ಎಂದರೆ ಸರಿ. ಆ ಸಂದರ್ಭದಲ್ಲಿ ಕ್ರಯಪತ್ರದ ಶೆಡ್ಯೂಲ್ ಸ್ವತ್ತಿನ ಸರ್ಕಾರಿ ಮೌಲ್ಯ 4,50,000/- ರೂಗಳು ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯಪತ್ರದ ಶೆಡ್ಯೂಲ್ ಸ್ವತ್ತಿನ ಮಾರುಕಟ್ಟೆ ಮೌಲ್ಯ ಹೆಚ್ಚಾಗಿದೆ ಎಂದರೆ ಸರಿ ಎಂದು ಸದರಿ ಪಿ.ಡಬ್ಲ್ಯೂ-2 ರವರು ಒಪ್ಪಿಕೊಂಡಿದ್ದಾರೆ. ಅದೇ ರೀತಿಯಾಗಿ, ಈಗಿನ ಮಾರುಕಟ್ಟೆ ಮೌಲ್ಯದ ಅನುಸಾರ ಸದರಿ ನಿವೇಶನವನ್ನು ಆರೋಪಿತನಿಗೆ ನಾನು ಮಾರಾಟ ಮಾಡಲು ಇಚ್ಚಿಸುವುದಿಲ್ಲ ಎನ್ನುವುದನ್ನು ಸಹ ಸದರಿ ಪಿ.ಡಬ್ಲ್ಯೂ-2 ರವರು ಒಪ್ಪಿಕೊಂಡಿದ್ದಾರೆ. ಅದೇ ರೀತಿಯಾಗಿ, ಈ ಪ್ರಕರಣವನ್ನು ದಾಖಲಿಸುವ ಪೂರ್ವದಲ್ಲಿ ನಿ.ಪಿ.3 ರ ನೋಟೀಸನ್ನು ನೀಡಲು ಫಿರ್ಯಾದಿದಾರರ ಬದಲಾಗಿ, ಪಿ.ಡಬ್ಲ್ಯೂ-2 ರವರೇ ಮಾಹಿತಿಯನ್ನು ನೀಡಿರುತ್ತಾರೆ ಎಂಬುದನ್ನು ಸ್ವತಃ ಸದರಿಯವರೇ ಒಪ್ಪಿಕೊಂಡಿರುತ್ತಾರೆ. ಆದಕಾರಣ, ಈ

ಪ್ರಕರಣದ ಫಿರ್ಯಾದಿದಾರರಿಗೆ ಆರೋಪಿ ಮತ್ತು ಪಿ.ಡಬ್ಲ್ಯೂ-2 ರವರ ನಡುವೆ ನಡೆದಂತಹ ವ್ಯವಹಾರಗಳ ಕುರಿತು ಯಾವುದೇ ಮಾಹಿತಿ ಇಲ್ಲದೆ ಇದ್ದರೂ ಸಹ, ಪಿ.ಡಬ್ಲ್ಯೂ-2 ರವರು ಆರೋಪಿತನ ವಿರುದ್ಧ ಈ ಪ್ರಕರಣವನ್ನು ದಾಖಲು ಮಾಡಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ.

20. ಡಿ.ಡಬ್ಲ್ಯೂ-1 ರವರ ಪಾಟೀ ಸವಾಲಿನಲಿನಲ್ಲಿ ಫಿರ್ಯಾದಿ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದ ಸಂದರ್ಭದಲ್ಲಿ ಸದರಿ ಸವಾಲಿನ 4 ನೇ ಖಂಡಿಕೆಯಲ್ಲಿ,

> **"ಫಿರ್ಯಾದಿಯ ಪರವಾಗಿ ಅವರ ತಂದೆ ಕ್ರಯದ ಪ್ರತಿಫಲದ ಪೈಕಿ 2,00,000/- ರೂಗಳನ್ನು ಮುಂಗಡವಾಗಿ ಪಡೆದುಕೊಂಡರೂ ಸಹ, ಸದರಿ ಕ್ರಯ ಬಾಬ್ತು ನಾನು ಇನ್ನೂ 2.5 ಲಕ್ಷ ರೂಗಳನ್ನು ಫಿರ್ಯಾದಿಗೆ ಕೊಡಬೇಕು ಎಂದರೆ ಸರಿ, ದಿನಾಂಕ 22.10.2024 ರಂದು ನಿ.ಪಿ.1 ರಲ್ಲಿ ಕಾಣಿದಷ್ಟು ಹಣವಾಗಲೀ ಅಥವಾ ಕನಿಷ್ಟ 2.5 ಲಕ್ಷ ರೂಗಳಾಗಲೀ ನನ್ನ ಖಾತೆಯಲ್ಲಿ ಇರಲಿಲ್ಲ ಎಂದರೆ ಸರಿ"**

ಎಂದು ಒಪ್ಪಿಕೊಂಡಿದ್ದಾರೆ. ಮುಂದುವರೆದು ಚೆಕ್ ಅನ್ನು ಕೊಡುವಾಗ ಖಾತೆಯಲ್ಲಿ ಹಣ ಇಲ್ಲ ಲಕ್ಷ್ಮಿನಾರಾಯಣ ರವರು ಪಡೆದಿರುವ 2 ಲಕ್ಷ ರೂಗಳನ್ನು ನನಗೆ ಕೊಟ್ಟ 2-3 ದಿನಗಳ ನಂತರ ಚೆಕ್ ಅನ್ನು ನಗದೀಕರಣಕ್ಕೆ ಹಾಜರುಪಡಿಸಿದರೆ, ನಾನು ಅಗತ್ಯ ಹಣವನ್ನು ಖಾತೆಗೆ ಜಮಾ ಮಾಡುವೆ ಎಂದು ಹೇಳಿದ್ದೆ ಎಂಬುದಾಗಿ ಆರೋಪಿತನ್ನು ಹೇಳಿಕೆಯನ್ನು ನೀಡಿದ್ದಾರೆ. ನಿ.ಪಿ.8 ರ ಕ್ರಯ ಪತ್ರದಲ್ಲಿ ಫಿರ್ಯಾದಿದಾರರ ತಂದೆ ಪಿ.ಡಬ್ಲ್ಯೂ-2 ರವರು ಮುಂಗಡವಾಗಿ 2 ಲಕ್ಷ ರೂಗಳನ್ನು ಪಡೆದುಕೊಂಡಿದ್ದರು ಎನ್ನುವ ಕುರಿತು ಯಾವುದೇ

ರೀತಿಯ ಉಲ್ಲೇಖವಿರುವುದಿಲ್ಲ. ನಿ.ಪಿ.1ರ ಚೆಕ್ ಅನ್ನು 4,50,000/- ರೂಗಳಿಗೆ ಕ್ರಯದ ಪ್ರತಿಫಲದ ಬಾಬ್ತು ನೀಡಿರುವುದಾಗಿ ನಿ.ಪಿ.8ರಲ್ಲಿ ಉಲ್ಲೇಖವಿರುತ್ತದೆ. ಆದರೆ, ಸದರಿ ಪಿ.ಡಬ್ಲ್ಯೂ-2 ರವರು ತಮ್ಮ ಪಾಟೀ ಸವಾಲಿನಲ್ಲಿ ನೀಡಿದ ಹಳಿಕೆಗಳನ್ನು ಗಮನಿಸಿದಾಗ, ಆರೋಪಿ ಹಾಗೂ ಪಿ.ಡಬ್ಲ್ಯೂ-2 ರವರ ನಡುವೆ ಮೂಡುಗೋಡು ಗ್ರಾಮದ ಸರ್ವೆ ನಂಬರ್ 1/10 ರ 15 ಗುಂಟೆ ಜಮೀನಿನ ಕ್ರಯದ ವ್ಯವಹಾರವು ನಡೆದಿರುತ್ತದೆ. ಸದರಿ ಕ್ರಯದ ವ್ಯವಹಾರದ ಬಾಬ್ತು ದಿನಾಂಕ 31.07.2024 ರಂದು ಕರಾರು ಪತ್ರವನ್ನೂ ಸಹ ಪಿ.ಡಬ್ಲ್ಯೂ-2 ರವರೊಂದಿಗೆ ಆರೋಪಿತನು ಮಾಡಿಕೊಂಡಿದ್ದು, ಸದರಿ ಕರಾರನ್ನು ಪಿ.ಡಬ್ಲ್ಯೂ-2 ರವರು ಸ್ವತಃ ತನ್ನ ಬಳಿ ಇರಿಸಿಕೊಂಡು ಅದನ್ನು ಪಿ.ಡಬ್ಲ್ಯೂ-2 ರವರು ಆರೋಪಿತನಿಗೆ ಕೊಟ್ಟಿರುವುದಿಲ್ಲ ಎಂಬುದಾಗಿ ಆರೋಪಿತನು ತನ್ನ ಮುಖ್ಯ ವಿಚಾರಣೆಯಲ್ಲಿ ಸ್ಪಷ್ಟವಾಗಿ ಸಾಕ್ಷಿ ನುಡಿದಿರುತ್ತಾನೆ.

21. ಅತಿ ಮುಖ್ಯವಾಗಿ ಈ ಪ್ರಕರಣದಲ್ಲಿ ಆರೋಪಿತನು ತನ್ನ ಪ್ರತಿರಕ್ಷೆಗೆ ಪೂರಕವಾಗಿ ನಿ.ಡಿ.1 ರಿಂದ 5 ರ ದಾಖಲೆಗಳನ್ನು ಹಾಜರುಪಡಿಸಿದ್ದು, ಸದರಿ ದಾಖಲೆಗಳಂತೆ ದಿನಾಂಕ 01.08.2024 ರಂದು ಪಿ.ಡಬ್ಲ್ಯೂ-2 ರವರ ಖಾತೆಗೆ 2,00,000/- ರೂಗಳನ್ನು ಆರೋಪಿತನು ವರ್ಗಾವಣೆ ಮಾಡಿರುತ್ತಾನೆ. ಸದರಿ ಹಣವು ಮುಂಗಡ ಹಣವಲ್ಲ. ಅದು ಅಡಿಕೆ ಖರೀದಿ ಬಾಬ್ತು ಆರೋಪಿತನು ಕೊಟ್ಟಂತಹ ಹಣ ಎಂಬುದಾಗಿ ಸಾಬೀತುಪಡಿಸಲು ಪಿ.ಡಬ್ಲ್ಯೂ-2 ರವರು ವಿಫಲರಾಗಿರುತ್ತಾರೆ. ಇದಕ್ಕೆ ಸಂಬಂಧಪಟ್ಟಂತೆ ಸದರಿ ಪಿ.ಡಬ್ಲ್ಯೂ-2 ರವರು ಆರೋಪಿತನೊಂದಿಗೆ ಅಡಿಕೆ ವ್ಯವಹಾರವನ್ನು ಮಾಡಿದ ಬಗ್ಗೆಯಾಗಲೀ ಹಾಗೂ

ಅದರ ಬಾಬ್ತು ಹಣವನ್ನು ಕೊಟ್ಟ ಬಗ್ಗೆ ದಾಖಲೆಗಳನ್ನಾಗಲಿ ಮತ್ತು ಅಡಿಕೆ ಖರೀದಿ ಬಾಬ್ತು ರಶೀದಿಗಳನ್ನಾಗಲಿ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ. ಅದೇ ರೀತಿಯಾಗಿ, ಆರೋಪಿತನು ಒಬ್ಬ ಅಡಿಕೆ ವ್ಯಾಪಾರಿಯಾಗಿದ್ದು, ಸದರಿ ಆರೋಪಿತನು ಜಿ.ಎಸ್.ಟಿ. ಹೋಲ್ಡರ್ ಆಗಿರುವುದರಿಂದ, ಸಾಮಾನ್ಯವಾಗಿ 2,00,000/- ರೂ ಬೆಲೆಯ ಅಡಿಕೆಯನ್ನು ವ್ಯವಹಾರ ಮಾಡುವ ಸಂದರ್ಭದಲ್ಲಿ ಸದರಿ ಅಡಿಕೆ ಖರೀದಿ ಸಂಬಂಧ ರಶೀದಿಯನ್ನು ಕೊಡುತ್ತಾರೆ. ಈ ಪ್ರಕರಣದಲ್ಲಿ ಅಂತಹ ಯಾವುದೇ ರಶೀದಿಯನ್ನು ಫಿರ್ಯಾದಿದಾರರಾಗಲೀ ಅಥವಾ ಪಿ.ಡಬ್ಲ್ಯೂ-2 ರವರಾಗಲೀ ಹಾಜರುಪಡಿಸದೆ ಇರುವುದರಿಂದ, ಸದರಿ ಆರೋಪಿತನು ತನ್ನ ಪ್ರತಿರಕ್ಷೆಯಲ್ಲಿ ಹೇಳಿದಂತೆ 2,00,000/- ರೂಗಳನ್ನು ಮುಂಗಡವಾಗಿ ಆರೋಪಿತನಿಗೆ ಪಿರ್ಯಾದುದಾರರ ತಂದೆ ಪಿ.ಡಬ್ಲ್ಯೂ-2 ರವರಿಗೆ ಕೊಟ್ಟಿರುವಂತಹ ಸಾಧ್ಯತೆ ಇರುತ್ತದೆ.

22. ಅದೇ ರೀತಿಯಾಗಿ, ನಿ.ಪಿ.8ರ ಕ್ರಯದ ವ್ಯವಹಾರದ ಸಂಬಂಧ ಆರೋಪಿ ಮತ್ತು ಫಿರ್ಯಾದುದಾರರ ನಡುವೆ ಸೊರಬದ ನ್ಯಾಯಾಲಯದಲ್ಲಿ ಪ್ರಕರಣ ವಿಚಾರಣೆಗೆ ಬಾಕಿ ಇರುತ್ತದೆ. ಆದಕಾರಣ, ಒಂದು ವೇಳೆ ಸದರಿ ಫಿರ್ಯಾದುದಾರರಿಗೆ ನಿ.ಪಿ.8ರ ಅಡಿಯಲ್ಲಿ ಯಾವುದೇ ವಿವಾದ ಉಂಟಾಗಿದ್ದರೆ ಅದನ್ನು ಸಿವಿಲ್ ನ್ಯಾಯಾಲಯದಲ್ಲಿ ಬಗ್ಗೆಹರಿಸಿಕೊಳ್ಳಬಹುದಾಗಿರುತ್ತದೆ. ಸಿವಿಲ್ ಪ್ರಕರಣದಂತಹ ವ್ಯಾಜ್ಯಗಳಿಗೆ ಕ್ರಿಮಿನಲ್ ಸ್ವರೂಪದ ಬಣ್ಣವನ್ನು ಹಚ್ಚಿ ಈ ರೀತಿಯಾದ ಪ್ರಕರಣಗಳನ್ನು ದಾಖಲಿಸುವುದು ಸಮಂಜಸವಾಗಿರುವುದಿಲ್ಲ. ಆದ್ದರಿಂದ, ಈ ಪ್ರಕರಣದಲ್ಲಿ ಆರೋಪಿತನು

ಫಿರ್ಯಾದುದಾರರಿಗೆ ನಿ.ಪಿ.1ರ ಚೆಕ್ ಅನ್ನು ನಿ.ಪಿ.8ರ ಕ್ರಯದ ಶೆಡ್ಯೂಲ್ ಸ್ವತ್ತಿನ ಪ್ರತಿಫಲದ ಬಾಬ್ತು ನೀಡಿರುತ್ತಾನೆ ಎಂಬುದನ್ನು ಸಾಕ್ಷಾದಾರಗಳ ಮೂಲಕ ಫಿರ್ಯಾದಿದಾರರು ಸಾಬೀತುಪಡಿಸಿದ್ದಾರೆ. ಅದೇ ರೀತಿಯಾಗಿ, ಸದರಿ ಚೆಕ್ ಅನ್ನು ನಿಗದಿತ ಕಾಲಾವಧಿಯಲ್ಲಿ ಬ್ಯಾಂಕಿಗೆ ಹಾಜರುಪಡಿಸಿದ್ದು, ಸದರಿ ಚೆಕ್ಕು ನಿ.ಪಿ.8ರೊಂದಿಗೆ **ಆರೋಪಿತನ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ** ಎಂಬುದಾಗಿ ಅನಾದರಣಗೊಂಡಿರುತ್ತದೆ. ಆದರೆ, ಸದರಿ ಪಿ.ಡಬ್ಲ್ಯೂ-2 ರವರು ನಿ.ಪಿ.8ರ ಕ್ರಯದ ಪ್ರತಿಫಲದ ಪೈಕಿ 2 ಲಕ್ಷ ರೂಗಳನ್ನು ಮುಂಗಡವಾಗಿ ಈಗಾಗಲೇ ಪಡೆದುಕೊಂಡಿರುವುದರಿಂದ ಸದರಿ ಸಂಗತಿಯನ್ನು ದೂರಿನಲ್ಲಿ ಹೇಳದೆ ಈ ಪ್ರಕರಣವನ್ನು ದಾಖಲಿಸಿರುವುದು ಹಾಗೂ ಅತಿ ಮುಖ್ಯವಾಗಿ ಫಿರ್ಯಾದುದಾರರಾದ ಪಿ.ಡಬ್ಲ್ಯೂ-1 ರವರನ್ನು ಈ ಪ್ರಕರಣದಲ್ಲಿ ವಿಚಾರಣೆಗೆ ಒಳಪಡಿಸಿಕೊಳ್ಳದೆ ಇರುವುದು ಮತ್ತು ಸದರಿ ಮುಂಗಡ ಹಣವು ಅಡಿಕೆ ಬಾಬ್ತು ತಾನು ಪಡೆದಿದ್ದೇನೆ ಎಂಬ ಕುರಿತು ಪಿ.ಡಬ್ಲ್ಯೂ-2 ರವರು ಯಾವುದೇ ಸಾಕ್ಷಾದಾರಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸದೆ ಇರುವುದು ಸದರಿ ಪಿರ್ಯಾದಿಯ ಪ್ರಕರಣದ ಕುರಿತು ಸಂಶಯ ಉಂಟಾಗುತ್ತದೆ. ಆದಕಾರಣ, ಸದರಿ ಫಿರ್ಯಾದಿದಾರರು ಮತ್ತು ಪಿ.ಡಬ್ಲ್ಯೂ 2 ರವರು ಆರೋಪಿತನಿಂದ ನಿ.ಪಿ.8ರ ಅಡಿಯಲ್ಲಿ ಸ್ವತ್ತಿನ ಮೌಲ್ಯ ಹೆಚ್ಚಾಗಿರುವ ಕಾರಣ ಹೆಚ್ಚಿನ ಹಣಕ್ಕಾಗಿ ಈ ಪ್ರಕರಣವನ್ನು ದಾಖಲಿಸಿರುವ ಸಾಧ್ಯತೆ ಇದೆ ಎಂಬುದಾಗಿ ಅಭಿಪ್ರಾಯಪಟ್ಟು ದೂರಿನಲ್ಲಿ ಕೋರಿದಂತೆ ಯಾವುದೇ ಪರಿಹಾರಕ್ಕೆ ಫಿರ್ಯಾದುದಾರರು ಅರ್ಹರಾಗಿಲ್ಲ ಎಂಬುದಾಗಿ ನ್ಯಾಯಾಲಯವು

ಅಭಿಪ್ರಾಯಪಟ್ಟಿರುತ್ತದೆ. ಆದ್ದರಿಂದ, ಮೇಲಿನ ಅಂಶ 1 ರಿಂದ 3 ನ್ನು **ಸಕಾರಾತ್ಮಕವಾಗಿ** ಅಂಶ 4 ನ್ನು **ನಕಾರಾತ್ಮಕವಾಗಿ** ಉತ್ತರಿಸಲಾಗಿದೆ.

23. **ಅಂಶ–5**:– ಮೇಲಿನ ಅಂಶ 1 ರಿಂದ 4 ರಲ್ಲಿ ಚರ್ಚಿಸಿದ ಕಾರಣಗಳಿಗಾಗಿ ಈ ಕೆಳಕಂಡಂತೆಃ

## ಆದೇಶ

ಭಾರತೀಯ ನಾಗರೀಕ ಸುರಕ್ಷಾ ಸಂಹಿತೆಯ ಕಲಂ 278(1) ರ ಅಡಿಯಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಆರೋಪಿತನ ವಿರುದ್ಧ ಪಿರ್ಯಾದಿಯು ಅಪಾಧಿಸಿರುವ ಲಿಖಿತ ಪತ್ರಗಳ ವರ್ಗಾವಣೆ ಕಾಯ್ದೆ 138 ರ ಅಡಿಯಲ್ಲಿನ ಆರೋಪದಿಂದ ಆರೋಪಿತನನ್ನು ನಿರ್ದೋಷಿ ಎಂಬುದಾಗಿ ತೀರ್ಮಾನಿಸಿ ಖುಲಾಸೆಗೊಳಿಸಲಾಗಿದೆ.

ಆರೋಪಿತನು ಮತ್ತು ಅವರ ಪರ ಜಮೀನುದಾರರು ಬರೆದುಕೊಟ್ಟಿರುವ ಜಮೀನು ಮುಚ್ಚಳಿಕೆಗಳು ಭಾರತೀಯ ನಾಗರೀಕ ಸುರಕ್ಷಾ ಸಂಹಿತೆಯ ಕಲಂ 481 ನಂತೆ ಮುಂದಿನ 6 ತಿಂಗಳವರೆಗೆ ಜಾರಿಯಲ್ಲಿರುತ್ತವೆ.

*(ಶೀಘ್ರಲಿಪಿಗಾರರಿಂದ ನೇರವಾಗಿ ಕಂಪ್ಯೂಟರಿನಲ್ಲಿ ಬೆರಳಚ್ಚು ಮಾಡಿಸಿ, ನಂತರ ಅದನ್ನು ಓದಿ, ತಪ್ಪುಗಳನ್ನು ತಿದ್ದುಪಡಿಮಾಡಿ, ಈ ದಿನ ಅಂದರೆ, ದಿನಾಂಕಃ 29 ನೇ ಆಗಸ್ಟ್ 2026 ರಂದು ತೆರೆದ ನ್ಯಾಯಾಲಯದಲ್ಲಿ ಉದ್ಘೋಷಿಸಿದ್ದೇನೆ.)*

**(ಮಾದೇಶ ಎಂ.ವಿ.,)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,ಸಾಗರ.**

# ಅನುಬಂಧ

## 1. ಪಿರ್ಯಾದುದಾರರ ಪರವಾಗಿ ವಿಚಾರಣೆಯಾದ ಸಾಕ್ಷಿಗಳ ಪಟ್ಟಿ:

| | |
|---|---|
| ಪಿ.ಡಬ್ಲ್ಯೂ–1 | ಸುಮಂತ. |
| ಪಿ.ಡಬ್ಲ್ಯೂ–2 | ಎಸ್. ಎನ್. ಲಕ್ಷ್ಮಿನಾರಾಯಣ ರಾವ್. |

## 2. ಪಿರ್ಯಾದುದಾರರ ಪರ ಗುರ್ತಿಸಲಾದ ದಾಖಲೆಗಳ ಪಟ್ಟಿ:

| | |
|---|---|
| ನಿ.ಪಿ–1 | ಅಸಲು ಚೆಕ್ಕು |
| ನಿ.ಪಿ–2 | ಹಿಂಬರಹ. |
| ನಿ.ಪಿ–3 | ಕಾನೂನುಬದ್ಧ ನೋಟೀಸು. |
| ನಿ.ಪಿ–4 | ಅಂಚೆ ರಶೀದಿ. |
| ನಿ.ಪಿ–5 | ಅಂಚೆ ಇಲಾಖೆ ನೀಡಿದ ಹಿಂಬರಹ. |
| ನಿ.ಪಿ–6 | ಬ್ಯಾಂಕ್ ಚಲನ್. |
| ನಿ.ಪಿ–7 | ವಿಶೇಷ ಅಧಿಕಾರ ಪತ್ರ. |
| ನಿ.ಪಿ–8 | ಕ್ರಯ ಪತ್ರದ ಧೃಡೀಕೃತ ನಕಲು. |

## 3. ಆರೋಪಿಯ ಪರ ವಿಚಾರಣೆಯಾದ ಸಾಕ್ಷಿಗಳ ಪಟ್ಟಿ:

| | |
|---|---|
| ಡಿ.ಡಬ್ಲ್ಯೂ.1 | ಉಮೇಶ್. |

## 4. ಆರೋಪಿಯ ಪರ ಗುರ್ತಿಸಲಾದ ದಾಖಲೆಗಳ ಪಟ್ಟಿ:

| | |
|---|---|
| ನಿ.ಡಿ-1 | ಸ್ಟೇಟ್ ಮೆಂಟ್ ಆಫ್ ಅಕೌಂಟ್ಸ್ |
| ನಿ.ಡಿ-2 | 2025-26 ರ ಆದಾಯ ತೆರಿಗೆ ಪಾವತಿ ಸ್ವೀಕೃತಿ. |
| ನಿ.ಡಿ-3-5 | ಐ.ಟಿ. ರಿಟರ್ನ್ಸ್ ನ ಮೂರು ದಾಖಲೆಗಳು. |

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,ಸಾಗರ.**